

ದಾವಣಗೆರೆಯ ಪ್ರಸಿದ್ಧ ಟಗರು ಕಾಳಗ
ಚಿತ್ರಗಳು: ಸತೀಶ ಬಡಿಗೇರ್

# ಅದು 'ಬೆಣ್ಣೆ ದೋಸೆ' ಅಲ್ಲ 'ಬ್ಯಣ್ಣಿ ದ್ವಾಸಿ'ಯ ಊರು

■ ಪ್ರೀತಿ ನಾಗರಾಜ



ಆವಾಗ ನಾವು ಸಣ್ಣವರು. ದಾವಣಗೆರೆಯಲ್ಲಿ ನಮ್ಮ ಮನೆಗಳೆಲ್ಲಾ ಊರ ಹೊರಗೆ, ಅಂದರೆ ವಿದ್ಯಾನಗರದಲ್ಲಿ ಇದ್ದವು. ಎಷ್ಟು ದೂರ ಅಂದರೆ, ಆಟೋದವರು ಬಿಡಿ, ಭಿಕ್ಷುಕರೂ ಇದು ಊರಿಂದ ದೂರ ಅಂತ ಇತ್ತ ಸುಳಿಯುತ್ತಲೇ ಇರಲಿಲ್ಲ. ಆಗಾಗ ಬರುವ ತರಕಾರಿ ಮಾರುವ ಅಜ್ಜಿ, ಬಿಟ್ಟರೆ ಮಂಡಕ್ಕಿ ಮಾರುವ ಸಾಬಣ್ಣ. ಇಬ್ಬರೇ ನಮ್ಮ ಪಾಲಿಗೆ ಹೊರಗಿನಿಂದ ಬರುತ್ತಿದ್ದವರು. ಅಂಥದ್ದರಲ್ಲಿ ಒಂದು ದಿನ ಬೆಳಗ್ಗೆ 11ರ ಹೊತ್ತಿಗೆ ಗೇಟು ಕಟಕಟ ಸದ್ದಾಯಿತು. ಏನೋ ಗಾಳಿಗೆ ಅಲ್ಲಾಡುತ್ತಿರಬೇಕು ಎಂದುಕೊಂಡೆವು. ಅಮ್ಮ ಒಳಗೆ ರೊಟ್ಟಿ ಸುಡುತ್ತಿದ್ದರು. ನಾನು ಮತ್ತು ಅಕ್ಕ ಏನೋ ಆಟ ಆಡುತ್ತಾ ಕುಳಿತಿದ್ದೆವು. ಆ ಸದ್ದಿನ ಮೂಲದ ಬಗ್ಗೆ ತಕ್ಷಣಕ್ಕೆ ನೋಡುವ ಆಸಕ್ತಿಯೇ ಇರಲಿಲ್ಲ.

ಶಬ್ದ ಮತ್ತೆ ಜಾಸ್ತಿಯಾಯಿತು. ಕಟಕಟಕಟಕಟ ಹೋಗಿ 'ಅಮಾ' 'ಅಮೋವ್' 'ಯಕಾ ಅದೀರಿಲ್ಲ ಮನಿಯಾಗೆ' ಎಂದು ವಿವರಗಳನ್ನು ಆ ಧ್ವನಿ 'ಡಿಮಾಂಡ್' ಮಾಡಿತು.

ಪರಿಚಯದ ಧ್ವನಿ ಅಲ್ಲ. ಹೊಸಬರು ಯಾರು ಬಂದಿದ್ದಾರು ಇಷ್ಟು ಹೊತ್ತಿಗೆ ಎನ್ನುತ್ತಾ ಅಮ್ಮ 'ಹೋಗ್ ನೊಡ್ರವ ಯಾರಾರ ಅದುಕ್ಕೂ ನಾನೇ ಬರಬಕ' ಎಂದು ತಾಕೀತು ಮಾಡಿದ್ದರಿಂದ ಅಕ್ಕ ಹೊರಗೆ ಹೋದಳು. ಅವಳ ಹಿಂದೆ ನಾನೂ ಹೋದೆ.

ಗೇಟಿನ ಹೊರಗೆ ಕೆದರಿದ ಕೂದಲು, ಅಸ್ತವ್ಯಸ್ತವಾದ ಸೀರೆ